ಕಥೆ




## ಮಹಾಂತೇಶ ನವಲಕಲ್

ಕಲೆ: ವಿಶ್ವನಾಥ್ ಎ.ಎಸ್.


# ದೇವನಾಂಪ್ರಿಯನಾಗುವತ್ತ



ಆ ಹುಡುಗ ಅರಮನೆಯ ಒಳ ಪ್ರವೇಶಿಸಿದೊಡನೆ, ಅಶೋಕ ಸಾಮ್ರಾಟರ ಮೈಯ್ಯಲ್ಲಿ ವಿದ್ಯುತ್ ಸಂಚರಿಸಿದಂತಾಯಿತು. ಎಲ್ಲೋ ನೋಡಿದ ಮುಖ. ಬುದ್ಧ ಗುರುವಿನ ಕಿವಿಗಳಂತೆ ಕಿವಿಗಳು ಅಗಲವಾಗಿವೆ. ತೇಜೋಪುಂಜವಾದ ಮುಖಕಮಲ. ಮುಖಕಮಲದಲ್ಲಿ ಎರಡು ಶಾಂತ ಆರತಿಯಂತೆ ಉರಿಯುತ್ತಿರುವ ಬೆಳಕಿನ ಕಂಗಳು. ಈ ಭರತ ಖಂಡದ ಒಡೆಯ ಎರಡೂ ಕೈಗಳ ಮುಗಿದು ತಮ್ಮ ಆತಿಥ್ಯಕ್ಕೆ ಏನು ಬೇಕು ಎಂದು ಆ ಬಾಲಕನ ಎದುರು ನಿಂತಿದ್ದರು. ಆ ಹುಡುಗ ಕ್ಷಣ ನಕ್ಕು ಆತಿಥ್ಯದ ಪದವನ್ನು ತನ್ನ ಮುಂದೆ ಹೇಳಿದ್ದಕ್ಕೆ ಮತ್ತೆ ಕೇಳಿದ್ದಕ್ಕೆ ಅಲ್ಲೆ ಮೂಲೆಯಲ್ಲಿದ್ದ ನೀರಿನ ಹೊಂಡದಲ್ಲಿ ಕಿವಿ ತೊಳೆದುಕೊಂಡು ಬಂದು ಮತ್ತೆ ಆಸೀನನಾದ. ಬೌದ್ಧಧರ್ಮದಲ್ಲಿ ಆತಿಥ್ಯ ಎಂಬ ಪದಗಳಿಗೆ ಅಂತಹ ಮಹತ್ವವಿಲ್ಲ, ಆಹಾರಕ್ಕಾಗಿ ಭಿಕ್ಷಾಟನೆ, ಶಯನಕ್ಕಾಗಿ ವಿಹಾರ- ದೇಗುಲಗಳು, ತೃಷೆಗಾಗಿ ಬೊಗಸೆ ನೀರು ಇಷ್ಟು ಸಾಕು.

ಆ ಹುಡುಗನ ಕಣ್ಣು, ಮೂಲೆಯಲ್ಲಿ ನೇತು ಹಾಕಿದ್ದ ಖಡ್ಗದತ್ತ ಹೊರಳಿತು. ದೊಡ್ಡದಾದ ಖಡ್ಗವದು. ಅದರ ಮೇಲೆ ದೊಡ್ಡದಾದ ಅಕ್ಷರಗಳಿಂದ ಬರೆದಿತ್ತು 'ಮೌರ್ಯ ಯುವ ರಾಜಕುಮಾರ ಸ್ವರ್ಗವಾಸಿ ಸುಶೀಮನೆಂಬ ಮಹಾಯೋಧನನ್ನು ಸಂಹರಿಸಿದ ಖಡ್ಗವದು. ಇದು ಕೊಂದವನು ತನ್ನ ಪರಮ ವೈರಿಯ ಬಗ್ಗೆ ಮಹಾಯೋಧ ಸ್ವರ್ಗವಾಸಿ' ಎಂದು